ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೨೩ನೇ ಜನವರಿ ೧೯೯೦, ಮಾಘ ೩, ೧೯೧೧ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೦-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ರವರು ಪೀಠವನ್ನು ಅಲಂಕರಿಸಿದ್ದರು.]

ಸಂತಾಪ ಸೂಚನೆ

ಮಾಜಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಟಿ. ಶಿವಲಿಂಗಯ್ಯನವರು ದಿನಾಂಕ ೩೦ನೇ ನವೆಂಬರ್, ೧೯೮೯ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಮಾನ್ಯರು ೧೯೪೫ರಿಂದ ೧೯೪೯ರ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದುನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು.)

ಅಧ್ಯಕ್ಷರು.— ಮೃತ ಹೊಂದಿದ ಸದಸ್ಯರ ಕುಟುಂಬದವರಿಗೆ ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

PAPERS LAID ON THE TABLE

I SRI VEERENDRA PATIL (Chief Minister).— Sir, I beg to lay on the table of the House.

1 Notification No. HD No. 349 PEG 89, dated 29th October, 1989 The Karnataka State Police (Disciplinary Proceedings) (Amendment) Rules, 1989.

2 23rd Annual Report of Karnataka State Handicrafts Development Corporation Ltd., for the year 1986-87 as required Under Section 619(A) of the Companies Act, 1956.

3 3rd Annual Consolidated Report on the performance of the functions of the Lokayukta & Upalokayukta for the year 1988-89.

as required Under Section 12(7) (Karnataka Act 4/1985) of the Karnataka Lokayukta Act of 1984.

MR. SPEAKER:— Papers laid.

II SRI M. RAJASHEKARA MURTHY (Minister for Finance & Institutional Finance & Statistic) Sir, I beg to lay on the table of the House.

1 Notification No. FD 227 CSL 89. dated 2nd January, 1990 Amendment to Notification No. FD 164 CSO 79(I) dated 15th October 1981.

2 Notification No. FD 240 CSL 89, dated 2nd January, 1990 Amendment to notification No. FD 52 CSL 86 (I), dated 11th July, 1986.

MR. SPEAKER.— Papers laid.

III SRI K. H. RANGANATH (Minister for Agriculture, Horticulture, Education & Forests).— Sir I beg to lay on the table of the House.

1 Annual Audit Report on the Accounts of Karnataka University, Dharwad for the years 1980-81 & 1981-82 & 1982-83 & 1984-85

as required Under Section 42(3) of the Karnataka State Universities Act, 1976.

2 Annual Report of Mangalore University, Mangalore for the year 1987-88

as required Under Section 45 of the Karnataka State Universities Act 1976.

MR. SPEAKAR.— Papers laid.

IV SRI K. J. GEORGE (Minister for Food Civil Supplies and Transport).— Sir, I beg to lay on the table of the House.

Notification No. FTD 9 TMR 89, dated 30th December, 1989 The Karnataka Motor Vehicles (2nd Amendment) Rules, 1989.

MR. SPEAKER.— Papers laid.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ಅದೇನೆಂದರೆ, ಗೋಣಿ ಕೊಪ್ಪಲಿನಲ್ಲಿ ಪೋಲೀಸರ ಸಮ್ಮುಖದಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರೊಬ್ಬರ ಕಾರನ್ನು ಸುಟ್ಟು ಹಾಕಿರುವ ಬಗ್ಗೆ ಕಳುಹಿಸಿದ್ದೆ, ಅದು ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲ,

ಅಧ್ಯಕ್ಷರು.— ಯಾವುದನ್ನು ಅಡ್ಮಿಟ್ ಮಾಡಿದ್ದೀವೆಯೋ ಅದು ಬಂದಿರುತ್ತದೆ. ಅಡ್ಮಿಟ್ ಮಾಡದಿದ್ದರೆ ಆ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಬರುವುದಿಲ್ಲ,

ಶ್ರೀ ಎಲ್. ಆರ್, ಶಿವರಾಮೇಗೌಡ.— ಜಿಲ್ಲಾ ಪರಿಷತ್ತಿನ ಸದಸ್ಯರೊಬ್ಬರ ಕಾರನ್ನು ಪೋಲೀಸರ ಸಮ್ಮುಖದಲ್ಲಿ ಸುಟ್ಟು ಹಾಕಿದ್ದಾರೆ. ಜಿಲ್ಲಾ ಪರಿಷತ್ತಿನ ಸದಸ್ಯರು ಜವಾಬ್ದಾರಿಯುತ ವ್ಯಕ್ತಿ ಈ ವಿಷಯ ಬಹಳ ಪ್ರಾಮುಖ್ಯವಾಗಿದೆ, ಆದ್ದರಿಂದ ತಾವು ಇದನ್ನು ಪರಿಗಣಿಸಿ ನಾನು ಈ ವಿಷಯವನ್ನು ಎತ್ತಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ,— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಾಲ ಮನ್ನಾ ವಿಚಾರದಲ್ಲಿ ನಿನ್ನೆ ನಡೆದಂತಹ ಚರ್ಚೆಗೆ ಉತ್ತರ ಕೊಡವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ತಿಳಿಯಬಯಸುವುದೇನೆಂದರೆ, ಎಲ್ಲಾಪುರ ಗ್ರಾಮದಲ್ಲಿ ಕೃಷಿ